

ಬಗೆಯಲ್ಲಿ ಸಂಸ್ಕರಿಸಬೇಕಾಗಿತ್ತು. ಇದರ ಜೊತೆಗೆ ಸಸ್ಯಗಳು ದೊರಕುತ್ತಿದ್ದ ಸ್ಥಳ, ಋತು ಮತ್ತು ದಿನದ ಸಮಯಗಳು ಅವುಗಳ ಮೇಲೆ ಬೀರುತ್ತಿದ್ದ ಪ್ರಭಾವಗಳನ್ನು ನಿರ್ಧರಿಸಬೇಕಾಗುತ್ತಿತ್ತು. ಇಂತಹ ವಿಸ್ತೃತ ವಿಧಾನದಿಂದ ನೂರಾರು ಸಸ್ಯಗಳನ್ನು ಆರಿಸಿ, ಅವುಗಳಿಂದ ಔಷಧಿಗಳನ್ನು ತಯಾರಿಸುತ್ತಿದ್ದುದು ಆಯುರ್ವೇದ ಶ್ಲಾಘನೀಯ ಪದ್ಧತಿಗಳಲ್ಲಿ ಒಂದು. ಇವತ್ತಿನ ಕಮರ್ಷಿಯಲ್ ವಾತಾವರಣದಲ್ಲಿ ಇಷ್ಟೊಂದು ಸೂಕ್ಷ್ಮವಾಗಿ ಈ ಕೆಲಸ ನಡೆಯುತ್ತಿದೆಯೆ..? ಆಯುರ್ವೇದ ಔಷಧಿಗಳ ಮಿಶ್ರಣ ಪ್ರಮಾಣದ ಬಗ್ಗೆ ಸೂಕ್ತ ಮಾಹಿತಿ ಇದೆಯೆ..? ಎನ್ನುವುದೆಲ್ಲ ವಿಚಾರ ಮಾಡಬೇಕಾದ ಪ್ರಶ್ನೆಗಳು.

## ಔಷಧೀಯ ಸಸ್ಯಗಳ ವರ್ಗೀಕರಣ

ಬಳಕೆಯ ಉದ್ದೇಶದ ಆಧಾರದ ಮೇಲೆ ಔಷಧೀಯ ಸಸ್ಯಗಳನ್ನು ಹಲವಾರು ಬಗೆಗಳಲ್ಲಿ ವರ್ಗೀಕರಿಸಲಾಗಿದೆ. ಉದಾಹರಣೆಗೆ ಹಣ್ಣು ಬಿಡುವ ಸಸ್ಯಗಳು, ಚಿಗುರನ್ನು ಹರಡುವ ಸಸ್ಯಗಳು, ಹೂ ಬಿಡುವ ಸಸ್ಯಗಳು ಮತ್ತು ಹಣ್ಣು ಬಿಟ್ಟು ಸಾಯುವ ಸಸ್ಯಗಳು.

ವೃತ್ತಿನಿರತ ವೈದ್ಯರಿಗೆ ರೋಗಿಗಳಲ್ಲಿ ದೋಷಗಳು ಹೆಚ್ಚಾದಾಗ ಅವುಗಳ ಸ್ವಭಾವವನ್ನು ಗುರುತಿಸುವ ತರಬೇತಿಯನ್ನು ನೀಡಲಾಗುತ್ತಿತ್ತು. ಚಿಕಿತ್ಸೆಗೆ ತಕ್ಕಂತೆ ಔಷಧಿ ಮತ್ತು ಸೂಕ್ತ ಆಹಾರ ಪದ್ಧತಿಯನ್ನು ರೋಗಿಗಳಿಗೆ ಸೂಚಿಸಲಾಗುತ್ತಿತ್ತು. ಆದರೆ ಈಗ ಆ ನಿಟ್ಟಿನಲ್ಲೂ ವೈದ್ಯರ ಶ್ರದ್ಧೆ ಕಡಿಮೆಯಾಗಿರುವುದು ಕಂಡುಬರುತ್ತಿದೆ.

ಆಯುರ್ವೇದೀಯ ಔಷಧಿಗಳನ್ನು ಹೇಗೆ ತಯಾರಿಸುವುದು ಎಂಬುದನ್ನು ಚರಕ ವಿವರವಾಗಿ ತಿಳಿಸಿದ್ದಾನೆ. ಉದಾಹರಣೆಗೆ ಕಷಾಯವನ್ನು ತಯಾರಿಸಲು ಸಸ್ಯಗಳನ್ನು 16 ಭಾಗ ನೀರಿನೊಡನೆ ಅದು ಒಟ್ಟು ಗಾತ್ರದ 1/4 ರಷ್ಟು ಆಗುವ ತನಕ ಕುದಿಸಬೇಕು. ನಂತರ ಇದನ್ನು ಶುದ್ಧವಾದ

